ಮೂಲ ದಾವಾ ಸಂಖ್ಯೆ. 127/2018 ಪಿ ಡಬ್ಲ್ಯೂ 2

(ದಿನಾಂಕ 09-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಕೆ ವಕೀಲರಿಂದಃ-

ಈ ದಾವೆಯನ್ನು ನಾಗಪ್ಪ ಮತ್ತು ನಿಂಗಪ್ಪ ಇವರ ಮೇಲೆ ರಾಮಣ್ಣ ಇವರು ದಾಖಲಿಸಿದ್ದಾರೆ. ದಾವೆಯಲ್ಲಿ ಒಟ್ಟು ಎಷ್ಟು ಸರ್ವೆ ನಂಬರ್ ಜಮೀನುಗಳಿರುತ್ತವೆಂದರೆ ಸಾಕ್ಷಿಯು 2 ಜಮೀನುಗಳ ಸರ್ವೆ ನಂಬರುಗಳು ಗೊತ್ತು ಎನ್ನುತ್ತಾರೆ. ಅವೆಂದರೆ ಸರ್ವೆ ನಂ.266 ಮತ್ತು 158 ಇರುತ್ತವೆ. ಉಳಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಗಳು ಅವರ ಹಿರಿಯರ ಆಸ್ತಿ. ಹಾವಪ್ಪ ಮತ್ತು ಮರಿಗೋಣೆಪ್ಪ ಇಬ್ಬರು ಸಹೋದರರು ಎಂದರೆ ಸರಿ. ಮರಿಗೋಣೆಪ್ಪ ಇವರು ಸರ್ವೆ ನಂ.266 ನ್ನು ಸನ್ 1961 ರಲ್ಲಿ ಬಂಗಾರಿ ಗುಂಡಪ್ಪ ಇವರಿಗೆ ಅಡಮಾನ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಂತರದಲ್ಲಿ ಸನ್ 1963 ರಲ್ಲಿ ಸದರಿ ಮರಿಗೋಣೆಪ್ಪ ಇವರು ಸದರಿ ಆಸ್ತಿಯನ್ನು ಪ್ರತಿವಾದಿಯರ ತಂದೆ ಹಾವಪ್ಪ ಇವರಿಗೆ ರೂ.1500/- ಗಳಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಅಣ್ಣ ತಮ್ಮನಿಗೆ ಅಥವಾ ತಮ್ಮ ಅಣ್ಣನಿಗೆ ಆಸ್ತಿಯನ್ನು ಮಾರಾಟ ಮಾಡಿದ್ದರೆ ಅವರ ನಡುವೆ ವಿಭಾಗವಾಗಿತ್ತು ಎನ್ನುವ ಅರ್ಥ ಎಂದರೆ ಸರಿ. ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಸನ್ 1992 ರಲ್ಲಿ ಪ್ರತಿವಾದಿ ನಂ.3 ಮತ್ತು 5 ರವರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ